



ಗ್ರಾಹಕ: ವೈಟರ್, ಏನಿದು? ನನ್ನ ಸೂಪ್‌ನಲ್ಲಿ ಒಂದು ತಲೆಗೂದಲು ಬಿದ್ದಿದೆ...!
ವೈಟರ್: ಮತ್ತಿನ್ನೇನು, ನೀವು ಕೊಡುವ ಜುಜುಬಿ ಸೂಪ್ ಬೆಲೆಗೆ ಪೂರ್ತಿ ವಿಗ್ ಬೀಳಿಸಲೇನು?

★★★

ಪತ್ನಿ: ಮಗುವಿನ ಹಾಸಿಗೆಯನ್ನೇಕೆ ಅಷ್ಟೊಂದು ಎತ್ತರಕ್ಕೆ ಮಾಡಿಸಿದ್ದೀರಿ?
ಗುಂಡ: ಆತ ಕೆಳಗೆ ಬಿದ್ದರೆ ನಮಗೆ ಶಬ್ದ ಕೇಳಿಸಲೆಂದು.

★★★

ಗೆಳೆಯ: ನಮ್ಮ ಫಿಸಿಕ್ಸ್ ಟೀಚರ್ ಅವರ ಪತ್ನಿ ಬಯಾಲಜಿ ಟೀಚರ್‌ರಿಂದ ವಿಚ್ಛೇದನ ಪಡೆದುಕೊಂಡರಂತೆ, ಏಕೆ ಗೊತ್ತೆ?
ಗುಂಡ: ಏಕೆಂದರೆ ಅವರ ನಡುವೆ ಒಳ್ಳೆಯ ಕೆಮಿಸ್ಟ್ರಿ ಇರಲಿಲ್ಲ!

★★★



ಗುಂಡ ಡಿಜಿಟಲ್ ತೂಕ ಯಂತ್ರದ ಮೇಲೆ ನಿಂತು ತನ್ನ ತೂಕ ನೋಡುತ್ತಾ ಉಬ್ಬಿದ ಹೊಟ್ಟೆಯನ್ನು ಒಳಗೆಳೆದುಕೊಳ್ಳುತ್ತಿದ್ದ. ಅದನ್ನು ಗಮನಿಸಿದ ಆತನ ಪತ್ನಿ, 'ಅದರಿಂದೇನೂ ಪ್ರಯೋಜನವಿಲ್ಲ' ಎಂದು ಕೀಟಲೆ ಮಾಡಿದಳು.
ಗುಂಡ: 'ಪ್ರಯೋಜನವಿದೆ ಕಣೆ, ಇಲ್ಲದಿದ್ದರೆ ತೂಕವೆಷ್ಟು ಎಂದು ಓದಲು ಬೇರೆ ಯಾವುದೇ ವಿಧಾನದಿಂದಲೂ ಸಾಧ್ಯವಿಲ್ಲ!

(ಸಂಗ್ರಹ) ರಮಣ್ ಶೆಟ್ಟಿ
ರೆಂಜಾಳ್, ಮುಂಬೈ

### ಮತ್ತೊಮ್ಮೆ ಮಾಡಿದ

ಗುಂಡ: ಡಾಕ್ಟ್ರೇ ನೋಡಿ ನನ್ನ ಎರಡು ಕಿವಿಗಳೂ ಸುಟ್ಟು ಹೋಗಿವೆ.
ವೈದ್ಯ: ಛೇ! ಯಾಕೆ ಹೀಗಾಯ್ತು ಏನು ಮಾಡಿ ಕೊಂಡಿರಿ?
ಗುಂಡ: ನನ್ನ ಬಟ್ಟೆ ಐರನ್ ಮಾಡ್ತಾ ಇದ್ದೆ, ಫೋನ್ ರಿಂಗಾಯ್ತು ಫೋನ್ ಬದಲು ಐರನ್ ಬಾಕ್ಸ್ ಕಿವಿಗಿಟ್ಟುಕೊಂಡು ಬಿಟ್ಟೆ.
ವೈದ್ಯ: ಛೇ! ಇದು ತೀರಾ ಅನ್ಯಾಯ, ಅದು ಸರಿ ಆದರೆ ಇನ್ನೊಂದು ಕಿವಿ ಹೇಗೆ ಸುಟ್ಟಿತು?
ಗುಂಡ: ಆ ಅಯೋಗ್ಯ ಮತ್ತೆ ಫೋನ್ ಮಾಡಿದ್ದ ಡಾಕ್ಟ್ರೇ.

★★★

### ತಳ್ಳುತ್ತಿರುವವರು

ಗುಂಡ: ಏನಯ್ಯಾ ಈ ನದಿಯಲ್ಲಿ ಮೊಸಳೆಗಳ ಕಾಟ ತುಂಬಾ ಇದೆಯಂತೆ ಹೌದಾ?
ಅಂಬಿಗ: ಈಗ ನೀವು ಕುಳಿತಿರುವ ದೋಣಿಯನ್ನು ತಳ್ಳುತ್ತಿರುವವರು ಯಾರೂಂತ ತಿಳಿದಿದ್ದೀರಿ.

★★★

ಆಟೋ ಚಾಲಕ: ಅಯ್ಯೋ....!
ಗುಂಡ: ಏನಾಯ್ತು ಹಾಗೇಕೆ?
ಆಟೋ ಚಾಲಕ: ಸಾರ್ ನಾನು ಮೀಟರ್ ಹಾಕೋದೆ ಮರ್ತುಬಿಟ್ಟೆ.
ಗುಂಡ: ಪರ್ವಾಗಿಲ್ಲ ಬಿಡು, ನಾನು ಪರ್ಸ್ ತರೋದೆ ಮರ್ತ್ ಬಿಟ್ಟೆ.

★★★

### ಹೆಂಗ ಆದ್ರೂ ನೀ

ಹುಡುಗ: ಏನ್ ಹೆಂಗದಿ
ಹುಡುಗಿ: ಛೊಲೋ ಅದೀನಿ
ಹುಡುಗ: ಇತ್ತೀಚೆಗೆ ಬಾರಿ ಆಗಾಕತ್ತಿ ನೀನು
ಹುಡುಗಿ: ಅಂದ್ರ ಏನದು
ಹುಡುಗ: ಹಂಗಲ್ಲ, ನಿನ್ನ ಡ್ರಸ್ ಬಾರಿ ಮಸ್ತ್ ಐತಿ
ಹುಡುಗಿ: ಥ್ಯಾಂಕ್ಸ್
ಹುಡುಗ: ನಿನ್ ಲಿಪ್‌ಸ್ಟಿಕೂ ಒಪ್ಪುವಂಗ ಐತಿ
ಹುಡುಗಿ: (ನಾಚುತ್ತ) ಥ್ಯಾಂಕ್ಯು
ಹುಡುಗ: ನಿನ್ ಮೇಕಪ್ಪಂತೂ ಬ್ಯಾಡ ಆ ದ್ಯಾವ್ರೂ ಸಹ ಮೆಚ್ಕೊಂತಾನ
ಹುಡುಗಿ: ಅಯ್ಯೋ ಥ್ಯಾಂಕ್ಸ್ ಅಣ್ಣಾ
ಹುಡುಗ: ಏನ್ ಆದ್ರೂ ನೀ ಚೆಂದ್ ಕಾಣಂಗಿಲ್ಲ ಬಿಡವಾ!

(ಸಂಗ್ರಹ) ಸಾವಿತ್ರಮ್ಮ ಕೆ.ವಿಭೂತಿ

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ

ಶ್ರೀ ಸಾಯಿಬಾಬ ಉಪಾಸಕರು
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460